“ ಯುವಜನತೆಗೆ
ಮಾದರಿ
ವ್ಯಕ್ತಿತ್ವ!



# Brilliance
# Success
# Progress

**ಬಿ.ಎಸ್.ಪ್ರಶಾಂತ್**

ವ್ಯವಸ್ಥಾಪಕ ನಿರ್ದೇಶಕರು

**ಸೇಫ್ ವೀಲ್ಸ್ ಗ್ರೂಪ್ ಆಫ್ ಕಂಪನೀಸ್**

**ನೀವು ಒಬ್ಬರಿಗೆ ಉದ್ಯೋಗ ನೀಡಿದರೆ ಅವರಿಗೆ ಜೀವನ ನೀಡಿದಂತೆ.**
**ಅದೇ ಒಬ್ಬರನ್ನು ಸಶಕ್ತಗೊಳಿಸಿದರೆ ಅವರ ಜೀವನವನ್ನೇ ಬದಲಾಯಿಸಿದಂತೆ!**

ಬಿ.ಎಸ್.ಪ್ರಶಾಂತ್ ಮೈಸೂರಿನಲ್ಲಿ ಚಿರಪರಿಚಿತ ಹೆಸರು. ಸತತ ಎರಡೂವರೆ ದಶಕಗಳಿಂದ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಕೆಲಸ ಮಾಡುತ್ತಾ ಬಂದಿರುವ ಹೆಗ್ಗಳಿಕೆ ಪ್ರಶಾಂತ್ ಅವರದ್ದು. ಇವರ ಕೆಲಸಕ್ಕೆ ರಾಷ್ಟ್ರೀಯ ಪ್ರಶಸ್ತಿಯೂ ದೊರೆತಿದೆ. ಬಿ.ಎಸ್.ಪ್ರಶಾಂತ್ 1974ರ ಆಗಸ್ಟ್ 19ರಂದು ಬೆಟ್ಟಹಲಸೂರಿನಲ್ಲಿ ಶ್ರೀಮತಿ ಅಕ್ಕಮಹಾದೇವಿ ಹಾಗೂ ದಿ. ಶ್ರೀ ಶಿವಾನಂದ್ ಅವರ ಪುತ್ರನಾಗಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ಎಂ.ಎ. ವ್ಯಾಸಂಗ ಮಾಡಿರುವ ಇವರು 1999ರಲ್ಲಿ ಸೇಫ್ ವ್ಹೀಲ್ಸ್ ಟೂರ್ಸ್ ಅಂಡ್ ಟ್ರಾವಲ್ಸ್ ಸಂಸ್ಥೆಯನ್ನು ಆರಂಭಿಸಿದರು

ಮೈಸೂರಿನಲ್ಲಿ 24/7 ಕ್ಯಾಬ್ ಸೇವೆ ಆರಂಭಿಸಿದ ಮೊದಲ ಸಂಸ್ಥೆ ಸೇಫ್ ವೀಲ್ಸ್. ಸುರಕ್ಷತೆಯ ಪ್ರಯಾಣಕ್ಕೆ ಮೈಸೂರಿನಲ್ಲಿ ಹೆಸರಾಗಿರುವ, ದೇಶದಾದ್ಯಂತ ವಾಹನ ಸೇವೆಗಳನ್ನು ಒದಗಿಸುವ ಸಂಸ್ಥೆ ಇದು. ಕೇವಲ ಇಬ್ಬರೊಂದಿಗೆ ಶುರುವಾದ ಸೇಫ್ ವೀಲ್ಸ್‌ನಲ್ಲಿ ಈಗ 50ಕ್ಕೂ ಹೆಚ್ಚು ಜನರಿದ್ದಾರೆ



ಹೀಗೆ 2009ರಲ್ಲಿ Spice Trip ಟೂರ್ ಪ್ಲಾನಿಂಗ್ ಕಂಪನಿ ಆರಂಭಿಸಲಾಯಿತು. ನಂತರ Alliance Square ರಿಯಲ್ ಎಸ್ಟೇಟ್ ಸಂಸ್ಥೆಯನ್ನೂ ಆರಂಭಿಸಿದರು. 2023ರಲ್ಲಿ ಹುಲ್ಲಹಳ್ಳಿಯ ರಾಂಪುರ ಬಳಿ Kapila Riverfront ಎಂಬ ಫಾರ್ಮ್ ಸ್ಟೇ ಕೂಡ ಆರಂಭಿಸಿದರು. ಈಗಲೂ ಸೇಫ್ ವೀಲ್ಸ್ ಗ್ರೂಪ್ ಆಫ್ ಕಂಪನೀಸ್ನಲ್ಲಿ ಹೀಗೆ ಸಾಕಷ್ಟು ಅಂಗಂಸ್ಥೆಗಳಿವೆ.



2007ರಲ್ಲಿ ಇವರು ನಿರ್ಮಾಣ ಮಾಡಿ ತಯಾರಿಸಿದ Visit Mysuru ಎಂಬ ಕಿರುಚಿತ್ರಕ್ಕೆ ಕೇಂದ್ರ ಸರ್ಕಾರದ ವತಿಯಿಂದ ಅತ್ಯುತ್ತಮ ಕಿರುಚಿತ್ರ ರಾಷ್ಟ್ರಪ್ರಶಸ್ತಿ ದೊರೆಯಿತು.



ಇದರೊಂದಿಗೆ ಅವರು ಮೈಸೂರು ಟ್ರಾವಲ್ಸ್ ಮಾಲೀಕರನ್ನು, ಪ್ರವಾಸೋದ್ಯಮಿಗಳನ್ನು ಒಂದೆಡೆ ಸೇರಿಸಲು ಮೈಸೂರು ಟ್ರಾವಲ್ ಏಜೆಂಟ್ಸ್ ಅಸೋಸಿಯೇಶನ್ (ಈಗ ಮೈಸೂರು ಟ್ರಾವಲ್ಸ್ ಅಸೋಸಿಯೇಶನ್) ಆರಂಭಿಸಿದರು. ಜೊತೆಗೆ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಜಾಗೃತಿ ಮೂಡಿಸಲು Let’s Do it! ಒಥಿಂಡಿಜ ಆರಂಭಿಸಿದರು. ಈ ಸಂಸ್ಥೆಯ ಮೂಲಕ ಸ್ವಸಹಾಯಕರು, ಮೈಸೂರಿನ ಜನರನ್ನು ಒಟ್ಟುಗೂಡಿಸಿ ಸ್ವಚ್ಛತಾ ಆಂದೋಲನಗಳನ್ನು ನಡೆಸಿದರು. ಇದಾದ ನಂತರ ಮೈಸೂರಿನ ಪ್ರವಾಸಿ ಸ್ಥಳಗಳನ್ನು ಜನರಿಗೆ ಪರಿಚಯಿಸಲು, ಅದರ ಬಗ್ಗೆ ಮಾಹಿತಿ ನೀಡಲು Visit Mysuru ಹೊಸ ಯೂಟ್ಯೂಬ್ ಚಾನೆಲ್ ಆರಂಭಿಸಿದರು. ಈಗ ಆ ಯೂಟ್ಯೂಬ್ ಚಾನೆಲ್‌ನಿಂದ ಮೈಸೂರು ದಸರಾ ಎಂಬ ಹೊಸ ವಿಡಿಯೋ ಬಿಡುಗಡೆಯಾಗಿದ್ದು, ಜಗತ್ತಿನಾದ್ಯಂತ ಜನರನ್ನು ಸೆಳೆಯುತ್ತಿದೆ.



ಬಿ.ಎಸ್.ಪ್ರಶಾಂತ್ ಮೈಸೂರು ಶಾಪಿಂಗ್ ಫೆಸ್ಟಿವಲ್, ಓಪನ್ ಸ್ಟ್ರೀಟ್ ಫೆಸ್ಟಿವಲ್, ಮೈಸೂರು ಟ್ರಾವಲ್ ಮಾರ್ಟ್‌ನಂತಹ ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸಿ ಮೈಸೂರಿನ ಪ್ರವಾಸೋದ್ಯಮವನ್ನು ಪ್ರಚಾರ ಮಾಡುತ್ತಿದ್ದಾರೆ.



ಬಿ.ಎಸ್.ಪ್ರಶಾಂತ್ ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟ, ಮೈಸೂರು ಟ್ರಾವಲ್ಸ್ ಅಸೋಸಿಯೇಶನ್, ಸ್ಕಾಲ್ ಇಂಟರ್ನ್ಯಾಷನಲ್ ಮೈಸೂರು ಸೇರಿದಂತೆ ವಿವಿಧ ಸಂಸ್ಥೆಗಳ ಭಾಗವಾಗಿದ್ದಾರೆ. ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



# ಪ್ರಶಸ್ತಿ ಮತ್ತು ಪುರಸ್ಕಾರಗಳು

## ಅತ್ಯುತ್ತಮ ರಾಷ್ಟ್ರೀಯ ಪ್ರವಾಸೋದ್ಯಮ ಚಿತ್ರ (ವಿಶೇಷ ಪ್ರಶಸ್ತಿ)

ಚಿತ್ರ: ವಿಸಿಟ್ ಮೈಸೂರು.
ಮೈಸೂರಿನ ಭವ್ಯ ಪರಂಪರೆಯನ್ನು ಸಾರಿದ ಚಿತ್ರ

## ಕೇರಳದ FUCA ಪ್ರಶಸ್ತಿ

ಜಾಹೀರಾತು ಉದ್ಯಮದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ, ತಮ್ಮ ಛಾಪಿನ ಮೂಲಕ ಹೊಸ ಅಲೆ ಮೂಡಿಸಿದ ಪ್ರಮುಖ, ಕ್ರಿಯಾಶೀಲ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ ನೀಡುವ ಪ್ರಶಸ್ತಿ

## ಅತ್ಯುತ್ತಮ ಪ್ರವಾಸೋದ್ಯಮ ಜಾಹೀರಾತು

FKCCI ವತಿಯಿಂದ ಕರ್ನಾಟಕ ಪ್ರವಾಸೋದ್ಯಮ ಕ್ಷೇತ್ರದವರಿಗೆ ನೀಡುವ ಪ್ರಶಸ್ತಿ

ಕೌಟಿಲ್ಯ ವಿದ್ಯಾಲಯದ ವತಿಯಿಂದ **"ಯಶಸ್ವಿ ಸಾಧಕ"** ಪ್ರಶಸ್ತಿ

ಡಿಎಂಎಸ್ ಚಂದ್ರವನ ಆಶ್ರಮದ ವತಿಯಿಂದ **"ಕಾಯಕ ಸೇವಾ ಧುರೀಣ"** ಪ್ರಶಸ್ತಿ

# ವಿವಿಧ ಸಂಘ-ಸಂಸ್ಥೆಗಳಲ್ಲಿ ಬಿ.ಎಸ್.ಪ್ರಶಾಂತ್ ಅವರ ಹುದ್ದೆಗಳು

**ಅಧ್ಯಕ್ಷರು**
ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟ

**ಮಾಜಿ ಅಧ್ಯಕ್ಷರು**
ಮೈಸೂರು ಟ್ರಾವಲ್ಸ್ ಅಸೋಸಿಯೇಶನ್

**ಅಧ್ಯಕ್ಷರು**
ಮೈಸೂರು ಟ್ರಾವಲ್ ಮಾಲೀಕರ ವಿವಿಧೋದ್ದೇಶ ಸಹಕಾರ ಸಂಘ

**ಅಧ್ಯಕ್ಷರು**
ಲೆಟ್ಸ್ ಡೂ ಇಟ್, ಮೈಸೂರು

**ಅಧ್ಯಕ್ಷರು**
ಸ್ಕಾಲ್ ಇಂಟರ್ನ್ಯಾಷನಲ್, ಮೈಸೂರು

**ಮಾಜಿ ಅಧ್ಯಕ್ಷರು**
ಅಂತರರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ, ಮೈಸೂರು

**ಅಧ್ಯಕ್ಷರು**
ಮೈಸೂರು ಜಿಲ್ಲಾ ಜಿಮ್ನಾಸ್ಟಿಕ್ಸ್ ಅಸೋಸಿಯೇಶನ್

**ಸಂಸ್ಥಾಪಕ ನಿರ್ದೇಶಕರು**
ಕರ್ನಾಟಕ ಟೂರಿಸಂ ಸೊಸೈಟಿ

**ಖಜಾಂಚಿ**
ಮೈಸೂರು ಕ್ರಿಕೆಟ್ ಕ್ಲಬ್

**ಕಾರ್ಯಕಾರಿ ಸಮಿತಿ ಸದಸ್ಯರು**
ಕರ್ನಾಟಕ ಬಸ್ ಎಂಡ್ ಕಾರ್ ಆಪರೇಟರ್ಸ್ ಕಾನ್ಫೆಡೆರೇಶನ್ ಆಫ್ ಇಂಡಿಯಾ (BOCI)

**ಕಾರ್ಯಕಾರಿ ಸಮಿತಿ ಸದಸ್ಯರು**
ಕರ್ನಾಟಕ ಟೂರಿಸಂ ಫೋರಂ

**ಕಾರ್ಯಕಾರಿ ಸಮಿತಿ ಸದಸ್ಯರು**
ಕರ್ನಾಟಕ ಟೂರಿಸಂ ಸೊಸೈಟಿ